ರಾಜ್ಯದಲ್ಲಿ ತ್ವರಿತಗತಿ ನ್ಯಾಯಾಲಯಗಳ ಸ್ಥಾಪನೆ ಕುರಿತು

89 (259) ಶ್ರೀ ಸುರೇಶ್ ಕುಮಾರ್ ಎಸ್ (ರಾಜಾಜಿನಗರ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ತ್ವರಿತಗತಿ (ಫಾಸ್ಟ್ ಟ್ರಾಕ್) ನ್ಯಾಯಾಲಯಗಳನ್ನು ಸ್ಥಾಪಿಸಲು ನಿಶ್ಚಿಯಿಸಲಾಗಿತ್ತು

ಆ) ಎಷ್ಟು ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ?

ಶ್ರೀ ಡಿ ಬಿ ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) 93

ಆ) 69 ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದ್ದು, ಆ ಪೈಕಿ 63 ನ್ಯಾಯಾಲಯಗಳು ಕರ್ತವ್ಯ ನಿರ್ವಹಿಸುತ್ತಿವೆ

ಬೆಂಗಳೂರು ನಗರದ ಮುನ್ಸಿಪಾಲಿಟಿ ಕೌನ್ಸಿಲ್‌ಗಳಲ್ಲಿ ಸ್ಟ್ಯಾಂಪ್ ಡ್ಯೂಟಿ ಹೆಚ್ಚಿಗೆ ಪಡೆದಿರುವುದರ ಬಗ್ಗೆ

90 (260 ಶ್ರೀ ಸುರೇಶ್ ಕುಮಾರ್ ಎಸ್ (ರಾಜಾಜಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದ ಸುತ್ತಲೂ ಇರುವ ನಗರ ಮುನ್ಸಿಪಾಲಿಟಿ ಕೌನ್ಸಿಲ್‌ಗಳಲ್ಲಿ ಸ್ಟಾಂಪ್ ಡ್ಯೂಟಿಯನ್ನು ಹೆಚ್ಚಿಗೆ ಪಡೆದು ಹಣದ ದುರುಪಯೋಗ ಆಗಿರುವ ಪ್ರಕರಣದಲ್ಲಿ ರಾಜ್ಯದ ಲೋಕಾಯುಕ್ತರು ಇದುವರೆವಿಗೂ ಎಷ್ಟು ವರದಿಗಳನ್ನು ಸಲ್ಲಿಸಿದ್ದಾರೆ

ಆ) ಈ ವರದಿಗಳಲ್ಲಿ ಯಾವ ವ್ಯಕ್ತಿಗಳನ್ನು ತಪ್ಪಿತಸ್ಥರೆಂದು ಗುರುತಿಸಲಾಗಿದೆ

ಇ) ಈ ಕುರಿತಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೆನು

ಈ) ಲೋಕಾಯುಕ್ತ ವರದಿಯ ಪ್ರಕಾರ ದುರುಪಯೋಗ ಆಗಿರುವ ಹಣದ ಮೊತ್ತ ವೆಷ್ಟು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಅ) ಒಂದು

ಆ) ಅನುಬಂಧದಲ್ಲಿ ನೀಡಲಾಗಿದೆ

ಇ) ಎಲ್ಲಾ 22 ಅಧಿಕಾರಿಗಳ ವಿರುದ್ಧವೂ ಪೂರ್ಣ ಪ್ರಮಾಣದ ಇಲಾಖಾ ವಿಚಾರಣೆಯನ್ನು ದಿನಾಂಕ 10-12-2003ರ ಆದೇಶದಲ್ಲಿ ಸನ್ಮಾನ್ಯ ಲೋಕಾಯುಕ್ತರಿಗೆ ವಹಿಸಲಾಯಿತು ನಿವೃತ್ತಿ ಹೊಂದಿದ 3 ಅಧಿಕಾರಿಗಳನ್ನು ಹೊರತುಪಡಿಸಿ ಸೇವೆಯಲ್ಲಿರುವ ಎಲ್ಲಾ 19 ಅಧಿಕಾರಿ ನೌಕರರನ್ನು ಅಮಾನತ್ತುಗೊಳಿಸಲಾಗಿದೆ

ಈ) ಲೋಕಾಯುಕ್ತ ವರದಿಯ ಪ್ರಕಾರ ಖಜಾನೆಯಿಂದ 7 ನಗರಸಭೆಗಳು ಅನಧಿಕೃತವಾಗಿ ತೆಗೆದ ಮೊತ್ತ ರೂ 231,67,36,342-00 ಆಗಿರುತ್ತದೆ

ಅನುಬಂಧ

ಚುಕ್ಕೆ ಗುರುತಿಲ್ಲದ ವಿಧಾನ ಸಭಾ ಪ್ರಶ್ನೆ ಸಂಖ್ಯೆ 260 ರ (ಅ)

ಶ್ರೀ ಶ್ರೀಮತಿ

1 ಕೆ ಎಂ ರಾಮಚಂದ್ರನ್, ಕೆ ಎಎಸ್,